200

# ಕರ್ನಾಟಕ ಲೋಕಾಯುಕ್ತ

**ಸಂ.ಕಂಪ್ಲೇಂಟ್/ಉಪಲೋಕ್/ಎಂ.ವೈ.ಎಸ್-8816/2015/ಡಿಆರ್‌ಇ-5**

ಬಹುಮಹಡಿಗಳ ಕಟ್ಟಡ,
ಡಾ: ಅಂಬೇಡ್ಕರ್ ವೀಧಿ,
ಬೆಂಗಳೂರು-560 001,
ದಿನಾಂಕ:22-08-2017.

***ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(1)ರ ಅನ್ವಯ ವರದಿ***

ವಿಷಯ: ಶ್ರೀ.ತಾಂಡೇಶ ತಂದೆ ಲಕ್ಷ್ಮೇಗೌಡ, ವಾಸ: ಬಿ.ಕಾಟೇಹಳ್ಳಿ ಕೊಪ್ಪಲು ಹಾಸನ ತಾಲ್ಲೂಕು ಮತ್ತು ಜಿಲ್ಲೆ ಇವರು ಸಲ್ಲಿಸಿದ ದೂರಿನ ಕುರಿತು.

****

ಈ ದೂರನ್ನು ಶ್ರೀ.ತಾಂಡೇಶ ತಂದೆ ಲಕ್ಷ್ಮೇಗೌಡ, ವಾಸ: ಬಿ.ಕಾಟೇಹಳ್ಳಿ ಕೊಪ್ಪಲು ಹಾಸನ ತಾಲ್ಲೂಕು ಮತ್ತು ಜಿಲ್ಲೆ (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ) ಇವರು (1)ಶ್ರೀ.ಶ್ರೀನಿವಾಸ ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಬಿ.ಕಾಟೇಹಳ್ಳಿ ಗ್ರಾಮ ಪಂಚಾಯತಿ, ಹಾಸನ ತಾಲ್ಲೂಕು ಮತ್ತು ಜಿಲ್ಲೆ ಹಾಗೂ (2) ಶ್ರೀ ಮೋಹನ, ಕಾರ್ಯದರ್ಶಿ, ಹೆರಗು ಗ್ರಾಮ ಪಂಚಾಯತಿ, ದೊಡ್ಡ ಹೋಬಳಿ, ಹಾಸನ ತಾಲ್ಲೂಕು ಮತ್ತು ಜಿಲ್ಲೆ (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ಇವರ ವಿರುದ್ಧ ಸಲ್ಲಿಸಿದ ದೂರನ್ನು ಕರ್ನಾಟಕ ಲೋಕಾಯುಕ್ತ ಅಧಿನಿಯಮದಡಿ ತನಿಖೆಗಾಗಿ ಕೈಗೆತ್ತಿಕೊಳ್ಳಲಾಯಿತು.

2. **ದೂರಿನ ಸಂಕ್ಷಿಪ್ತ ವಿವರ:**

ಬಿ. ಕಾಟೇಹಳ್ಳಿ ಕೊಪ್ಪಲು ಗ್ರಾಮದಲ್ಲಿ 40 ಅಡಿ ಅಗಲದ ಒ.ಡಿ.ಪಿ ರಸ್ತೆಯನ್ನು ಬಿ. ಕಾಟೇಹಳ್ಳಿ ಗೇಟಿನಿಂದ ಸತ್ಯಮಂಗಲ ಗ್ರಾಮದವರೆಗೆ ಬಾಹ್ಯಕಾಶ ನಗರದವರೆಗೆ ಹಾಸನ ನಗರಾಭಿವೃದ್ಧಿ ಮಂಡಳಿಯಿಂದ ಲೇಔಟ್ ಪ್ಲ್ಯಾನ್ ಅನುಮೋದಿಸಲಾಗಿದೆ. ಸದರಿ ಪ್ಲ್ಯಾನ್ ನಂ: 419/83-84 ದಿ: 19.5.1984ರಲ್ಲಿ ಅನುಮೋದನೆಯಾಗಿದೆ ಆದರೆ ಈ ರಸ್ತೆಯನ್ನು 2ನೇ ಎದುರುದಾರರು ಮತ್ತು ಇತರೆ ಖಾಸಗಿ ವ್ಯಕ್ತಿಗಳು ಸೇರಿಕೊಂಡು 40 ಅಡಿ ಓ.ಡಿ.ಪಿ ರಸ್ತೆಗೆ ಅಡ್ಡವಾಗಿ ಜೆ.ಸಿ.ಬಿಯಿಂದ ಕಂದಕ ನಿರ್ಮಿಸಿದ್ದಾರೆ. ನಗರಾಭಿವೃದ್ಧಿ ಪ್ರಾಧಿಕಾರ ಜಿಲ್ಲಾಧಿಕಾರಿಗಳು ಮತ್ತು ರಾಜ್ಯಪಾಲರಿಗೆ ಗ್ರಾಮಸ್ಥರು ದೂರು ಕೊಟ್ಟರೂ ಸಹ ಯಾವುದೇ ಪ್ರಯೋಜನವಾಗಿಲ್ಲ ಎಂದು ದೂರು ಸಲ್ಲಿಸಿದ್ದಾರೆ.

701

3. ಈ ದೂರಿನ ಮೇಲೆ ಎದುರುದಾರರಿಂದ ಆಕ್ಷೇಪಣೆಗಳನ್ನು ಕೇಳಲಾಗಿದೆ.

(ಎ) 1ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ನಗರಾಭಿವೃದ್ಧಿ ಪ್ರಾಧಿಕಾರದ ಆಯುಕ್ತರಿಗೆ ಮಾಹಿತಿಯನ್ನು ನೀಡಲಾಗಿ ಪ್ರಾಧಿಕಾರದ ಅಧಿಕಾರಿಗಳು ಬಂದು ಸ್ಥಳ ಪರಿಶೀಲನೆ ಮಾಡಿದ್ದಾರೆ. ವಿವಾಧಿತ ರಸ್ತೆಯು ವಿನ್ಯಾಸದ ಪ್ರಕಾರ 40 ಅಡಿ ರಸ್ತೆ ಅಂತ ಖಚಿತ ಪಡಿಸಿದ ನಂತರ ಟ್ರೆಂಚ್ ಮಾಡಲಾಗಿದ್ದ ಜಾಗವನ್ನು ಮಣ್ಣಿನಿಂದ ಮುಚ್ಚಲಾಗಿದೆ ಯಥಾಸ್ಥಿತಿಯಲ್ಲಿ ರಸ್ತೆ ಮುಂದುವರೆಸುವಂತೆ ಸೂಚಿಸಿ ಸಾರ್ವಜನಿಕರಿಗೆ ಓಡಾಡಲು ಮಾಹಿತಿ ಕೊಡಲಾಗಿದೆ ಅಂತ ತಿಳಿಸಿದ್ದಾರೆ.

(ಬಿ) 2ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ಬಿ.ಕಾಟಿಹಳ್ಳಿ ಗ್ರಾಮದ ಸ.ನಂ: 10/5ರಲ್ಲಿ ನಾನು ಮನೆ ಕಟ್ಟಿದ್ದೇನೆ ಇದರಿಂದ ಸಾರ್ವಜನಿಕರಾಗಲೀ ಮತ್ತು ಗ್ರಾಮಸ್ಥರಿಗೆ ಆಗಲೀ ತೊಂದರೆ ಉಂಟಾಗಲಿಲ್ಲ ದೂರುದಾರರು ವೈಯಕ್ತಿಕ ದ್ವೇಷದಿಂದ ನನ್ನ ಮೇಲೆ ದೂರು ಸಲ್ಲಿಸಿದ್ದಾರೆ ಅಂತ ಹೇಳುತ್ತಾರೆ. ಬಿ.ಕಾಟೇಹಳ್ಳಿಯ ಗ್ರಾಮಸ್ಥರು ದೂರುದಾರರು ಸಹ ಸ.ನಂ: 10/14ರಲ್ಲಿ ರೆವಿನ್ಯೂ ಜಾಗಗಳಲ್ಲಿ ಬಾಡಿಗೆ ಉದ್ದೇಶದ ಮನೆ ಕಟ್ಟಿದ್ದಾರೆ ಕಂದಕವನ್ನು ಈಗ ಮುಚ್ಚಿಸಲಾಗಿದೆ. ನಗರಾಭಿವೃದ್ಧಿಯವರು ಸ. ನಂ: 10/14ಗೆ ಲಗತ್ತಾದ ಜಮೀನಿನಲ್ಲಿ ಕೇವಲ 30 ಅಡಿ ರಸ್ತೆಯನ್ನು ಅನುಮೋದಿಸಿ ಲೇಔಟ್ ನಿರ್ಮಿಸಿಕೊಟ್ಟಿರುತ್ತಾರೆ. ಅಂತ ಪತ್ರ ಬರೆದಿದ್ದಾರೆ.

4. ಈ ಆಕ್ಷೇಪಣೆಗಳ ಮೇಲೆ ದೂರುದಾರರ ಪ್ರತ್ಯುತ್ತರ ಕೇಳಲಾಗಿ, ನಗರಾಭಿವೃದ್ಧಿಯವರು ವಿನ್ಯಾಸದ ಪ್ರಕಾರ 40 ಅಡಿ ರಸ್ತೆ ನಿರ್ಮಿಸಿ ಸಾರ್ವಜನಿಕರ ಸಂಚಾರಕ್ಕೆ ಅವಕಾಶ ಮಾಡಿಕೊಟ್ಟಿಲ್ಲ ತಾವು ಸ್ಥಳಕ್ಕೆ ಭೇಟಿ ನೀಡಿದರೆ ವಾಸ್ತವಾಂಶ ತಿಳಿಯುತ್ತದೆ. ಆದ್ದರಿಂದ ರಸ್ತೆ ನಿರ್ಮಿಸಲು ನಿರ್ದೇಶನ ಕೊಡುವಂತೆ ಕೋರುತ್ತಾರೆ.

5. ಈ ಪ್ರಕರಣದ ಸಂಪೂರ್ಣ ಕಡತವನ್ನು ಪರಿಶೀಲಿಸಿದ್ದೇನೆ. ದೂರುದಾರರು ಮತ್ತು ಇತರೆ ಗ್ರಾಮಸ್ಥರು ಹೊಂದಿರುವ ನಿವೇಶನಗಳು ಅನ್ಯಕ್ರಾಂತ ಮಾಡಿದ ನಿವೇಶನಗಳೇ ಅಥವಾ ಇಲ್ಲವೇ ಎನ್ನುವುದು ತಿಳಿಯುತ್ತಿಲ್ಲ ದೂರುದಾರರು ಮತ್ತು ಇತರೆ ಗ್ರಾಮಸ್ಥರು ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ಅಭಿವೃದ್ಧಿ ಶುಲ್ಕ ಪಾವತಿಸಿದ್ದಾರೆ ಎನ್ನುವುದು ಸಹ ತಿಳಿಯುತ್ತಿಲ್ಲ. 40 ಅಡಿ ರಸ್ತೆಯ ಒಂದು ಭಾಗದಲ್ಲಿ ನಿರ್ಮಿಸಿದ ಟ್ರೆಂಚ್ ಅನ್ನು ಪುನಃ ಮುಚ್ಚಿಸಲಾಗಿದೆ ಅಂತ ಗ್ರಾಮಸ್ಥರು ಪತ್ರ ಬರೆದಿದ್ದಾರೆ. ಆದರೆ ಈಗ ಸದರಿ ರಸ್ತೆಯನ್ನು 30 ಅಡಿ ಅಗಲವನ್ನಾಗಿ ಏಕೆ ಅನುಮೋದಿಸಿದ್ದಾರೆ ಎನ್ನುವ ಬಗ್ಗೆ ದಾಖಲೆಗಳಿಲ್ಲ, ಕೇವಲ ಗ್ರಾಮಸ್ಥರ ಹೇಳಿಕೆಯಿಂದ ಈ ವಿಷಯ

211

ಸಾಬೀತಾಗುವುದಿಲ್ಲ 2ನೇ ಎದುರುದಾರರ ಮನೆ ಸ.ನಂ: 10/15ರಲ್ಲಿದೆ ಅಂತ ಅವರು ಹೇಳುತ್ತಿದ್ದು ಯಾವುದೇ ದಾಖಲೆಗಳನ್ನು ಸಹ ಸಲ್ಲಿಸಿಲ್ಲ. ಆದ್ದರಿಂದ ನಗರಾಭಿವೃದ್ಧಿ ಪ್ರಾಧಿಕಾರ ಹಾಸನ ಇವರಿಗೆ ಬಿ.ಕಾಟೀಹಳ್ಳಿ ಗ್ರಾಮಸ್ಥರು ಎಲ್ಲಾ ನಿವೇಶನಗಳನ್ನು ಅನ್ಯಕ್ರಾಂತ ಮಾಡಿಸಿದ್ದಾರೆಯೇ ಮತ್ತು ಅಭಿವೃದ್ಧಿ ಶುಲ್ಕ ಕಟ್ಟಿದ್ದಾರೆಯೇ ಎನ್ನುವುದರ ಬಗ್ಗೆ ವರದಿ ಮತ್ತು 40 ಅಡಿ ಅನುಮೋದಿತ ನಕ್ಷೆಯ ರಸ್ತೆಯನ್ನು 30 ಅಡಿ ಅಂತ ಯಾವ ಕಾರಣಕ್ಕಾಗಿ ಅನುಮೋದಿಸಲಾಗಿದೆ ಈ ಬಗ್ಗೆ ಯಾವ ಆದೇಶವಾಗಿದೆ ಎನ್ನುವ ಬಗ್ಗೆ ಖುದ್ದು ಹಾಜರಾಗಿ ವರದಿಯನ್ನು ಸಲ್ಲಿಸುವಂತೆ ಸೂಚಿಸಲಾಗಿತ್ತು.

6. ನಗರಾಭಿವೃದ್ಧಿ ಪ್ರಾಧಿಕಾರ ಹಾಸನದ ಆಯುಕ್ತರು ಖುದ್ದು ಹಾಜರಾದಾಗ 40 ಅಡಿ ರಸ್ತೆಯನ್ನು 30 ಅಡಿ ರಸ್ತೆಗೆ ಪರಿಷ್ಕರಿಸಿರುವುದಿಲ್ಲ. ಸಾರ್ವಜನಿಕ ರಸ್ತೆಗಳನ್ನು ಕಾಪಾಡಿಕೊಂಡು ಹೋಗುವುದು ಸ್ಥಳೀಯ ಸಂಸ್ಥೆಯ ಕರ್ತವ್ಯವಾಗಿದೆ ಅಂತ ತಿಳಿಸಿದ್ದಾರೆ. ದಿನಾಂಕ: 29-6-2017 ರಂದೇ ಆಯುಕ್ತರು ಒಂದು ಭಾಗದಲ್ಲಿ ರಸ್ತೆ ಅತಿಕ್ರಮಣವಾಗಿದ್ದು ಅದನ್ನು ತೆಗೆಸಲಾಗಿದೆ ಅಂತ ಹೇಳಿದ್ದರು. ಆದ್ದರಿಂದ, ಪೋಲೀಸ್ ಅಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ಹಾಸನ ಇವರಿಗೆ ವಿವಾದಿತ ಸ್ಥಳ ಪರಿಶೀಲನೆ ಮಾಡಿ ತನಿಖಾ ವರದಿಯನ್ನು ಸಲ್ಲಿಸಲು ಸೂಚಿಸಲಾಗಿತ್ತು.

7. ಅದರಂತೆ, ಪೋಲೀಸ್ ಅಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ಹಾಸನ ಇವರು ವಿವಾದಿತ ಸ್ಥಳ ಪರಿಶೀಲನೆ ಮಾಡಿ ವರದಿಯನ್ನು ಸಲ್ಲಿಸಿರುತ್ತಾರೆ. ಅದರಲ್ಲಿ ನಕ್ಷೆಯಲ್ಲಿ ಕಂಡ 40 ಅಡಿ ರಸ್ತೆಯ ಮೇಲೆ ಸಾರ್ವಜನಿಕರು ಮನೆಗಳನ್ನು ಕಟ್ಟಿಕೊಂಡಿದ್ದಾರೆ, ಒತ್ತುವರಿಯನ್ನು ತೆರವುಗೊಳಿಸಿ ಸಾರ್ವಜನಿಕರ ಉಪಯೋಗಕ್ಕೆ ಅನವು ಮಾಡಿಕೊಟ್ಟಿರುವುದಿಲ್ಲ ಅಂತ ಸ್ಪಷ್ಟವಾದ ವರದಿಯನ್ನು ಸಲ್ಲಿಸಿರುತ್ತಾರೆ. ಅಲ್ಲದೇ ನಗರಾಭಿವೃದ್ಧಿ ಪ್ರಾಧಿಕಾರದಿಂದ 40 ಅಡಿ ರಸ್ತೆಯನ್ನು 30 ಅಡಿಗೆ ಪರಿಷ್ಕರಣೆ ಮಾಡಿರುವುದಿಲ್ಲ ಆದರೂ ಸಹ ದೂರುದಾರರು ಮತ್ತು ಇತರೇ ಗ್ರಾಮಸ್ಥರು ಪರಿಷ್ಕರಣೆ ಆಗಿದೆ ಅಂತ ಹೇಳುತ್ತಿದ್ದಾರೆ.

8. ಎದುರುದಾರರು ರಸ್ತೆಯ ಒತ್ತುವರಿಯನ್ನು ತೆಗೆಸಿಹಾಕಲು ಯಾವುದೇ ಕ್ರಮವನ್ನು ತೆಗೆದುಕೊಂಡಿಲ್ಲ. ಸದರಿ ರಸ್ತೆಯನ್ನು ನಿರ್ವಹಣೆ ಮಾಡುವುದು ಸ್ಥಳೀಯ ಸಂಸ್ಥೆಯ ಜವಾಬ್ದಾರಿಯಾಗಿದ್ದು, ಎದುರುದಾರರು ತಮ್ಮ ಜವಾಬ್ದಾರಿಯನ್ನು ನಿರ್ವಹಿಸಿರುವುದಿಲ್ಲ. ಅಲ್ಲದೇ ಪೋಲೀಸ್ ಅಧೀಕ್ಷಕರು ಕರ್ನಾಟಕ ಲೋಕಾಯುಕ್ತ, ಹಾಸನ ಇವರ ವರದಿಯನುಸಾರ ಸದರಿ 40 ಅಡಿ ರಸ್ತೆ ಒತ್ತುವರಿ ಮಾಡಲಾಗಿದೆ ಮತ್ತು ಮನೆಗಳನ್ನು ನಿರ್ಮಿಸಲಾಗಿದೆ. ಆದ್ದರಿಂದ

ಬಿ.ಕಾಟೇಹಳ್ಳಿ ಗ್ರಾಮದ ಓ.ಡಿ.ಪಿ. ರಸ್ತೆ 40 ಅಡಿ ರಸ್ತೆ ಇರುವುದನ್ನು ಒತ್ತುವರಿ ಮಾಡಿಕೊಂಡಿರುವ ಸಾರ್ವಜನಿಕರನ್ನು ತೆರವುಗೊಳಿಸಿ ರಸ್ತೆಯನ್ನು ಸಾರ್ವಜನಿಕ ಬಳಕೆಗಾಗಿ ಕಾಪಾಡಿಕೊಂಡು ಹೋಗಲು ಕರ್ನಾಟಕ ಲೋಕಾಯುಕ್ತ ಅಧಿನಿಯಮ ಕಲಂ 12(1) ರಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ ಎದುರುದಾರರ ಶಿಸ್ತು ಪ್ರಾಧಿಕಾರಕ್ಕೆ ಶಿಪಾರಸ್ಸು ಮಾಡಲಾಗಿದೆ.

9. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2)ರ ಪ್ರಕಾರ, ಶಿಸ್ತು ಪ್ರಾಧಿಕಾರವು ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 12(1)ರ ವರದಿಯಲ್ಲಿನ ಶಿಫಾರಸ್ಸಿಗನುಗುಣವಾಗಿ ಕ್ರಮ ಕೈಗೊಂಡ ಬಗ್ಗೆ ಅಥವಾ ಕೈಗೊಳ್ಳಬಹುದಾದ ಕ್ರಮದ ಬಗ್ಗೆ ಈ ವರದಿ ತಲುಪಿದ ದಿನಾಂಕದಿಂದ ಒಂದು ತಿಂಗಳ ಅವಧಿಯೊಳಗೆ ಈ ಪ್ರಾಧಿಕಾರಕ್ಕೆ ತಿಳಿಸುವುದು.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

(ನ್ಯಾಯಮೂರ್ತಿ ಸುಭಾಷ್ ಬಿ. ಅಡಿ)
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ, ಬೆಂಗಳೂರು.